



# ಕಾಫಿ, ಟೀ, ವೈನ್ ಸ್ನಾನ



ಸ್ಪಾ ಜಪಾನಿನ ಸ್ನಾನ ವೈವಿಧ್ಯದ ಇನ್ನೊಂದು ಹೆಸರು. ಇಲ್ಲಿ 25ಕ್ಕೂ ಅಧಿಕ ವಿಧದ ಸ್ನಾನದ ಸೌಲಭ್ಯ ನೀಡುವ ರೆಸ್ಟೋರೆಂಟ್‌ಗಳಿವೆ. ಇದರಲ್ಲಿ ಅಧಿಕ ಬೇಡಿಕೆಯಿರುವುದು ಕಾಫಿ ಡಿಕಾಕ್ಷನ್ ಸ್ನಾನ, ಹಸಿರು ಚಹಾ ಡಿಕಾಕ್ಷನ್ ಸ್ನಾನ ಮತ್ತು ವರ್ಷದಲ್ಲಿ ಹನ್ನೆರಡು ದಿವಸ ಮಾತ್ರ ಲಭ್ಯವಿರುವ ಕೆಂಪು ವೈನ್ ಸ್ನಾನಕ್ಕೆ.

ಈ ಸ್ನಾನ ಸಾವಿರಾರು ಮಂದಿ ಮಹಿಳೆಯರು, ಪುರುಷರು ಮತ್ತು ಮಕ್ಕಳನ್ನು ಆಕರ್ಷಿಸುತ್ತಿದೆ. ಟೋಕಿಯೋದ ಯಾಕಾಹಾಮಾದ ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಇಂಥ ಸ್ನಾನದ ಸೌಲಭ್ಯವಿರುವ ಕೊಳಗಳು, (ಏಕಾಂತ ಬೇಕಿದ್ದರೆ ತೊಟ್ಟಿಗಳು) ಲಭ್ಯ.

ರಾಣಿ ಕ್ಲಿಯೋಪಾತ್ರಾ ಸೌಂದರ್ಯ ವರ್ಧನೆಗೆ ವೈನ್‌ನಲ್ಲಿ ಸ್ನಾನ ಮಾಡುತ್ತಿದ್ದಳಂತೆ. ಜಪಾನೀಯರು ಅಕ್ಕಿಯಿಂದ ತಯಾರಿಸಿದ ಕೆಂಪು ವೈನ್ ತುಂಬಿದ ಕೊಳದಲ್ಲಿ ಈಜುವುದು ಸೌಂದರ್ಯವೃದ್ಧಿಗಾಗಿ ಮಾತ್ರವಲ್ಲ, ಚರ್ಮರೋಗ ನಿವಾರಣೆಗಾಗಿ. ಇದರಿಂದ ಕಳೆದುಹೋದ ಯೌವನದ ಕಾಂತಿ ಮರಳುವುದಂತೆ! ಹನ್ನೆರಡು ಅಡಿ ಎತ್ತರದ ಬಾಟಲಿಯಿಂದ ಕೊಳಕ್ಕೆ ವೈನ್ ಹರಿಯುತ್ತಲೇ ಇರುತ್ತದೆ. ಓನ್ಸೆನ್ ಮನರಂಜನಾ ಪಾರ್ಕ್‌ನಲ್ಲಿರುವ ಕೊಳದಲ್ಲಿ ಹಸಿರು ವರ್ಣದ ಚಹಾ ಡಿಕಾಕ್ಷನ್ ಪೈಪಿನಲ್ಲಿ ಹರಿದು ಬರುತ್ತದೆ. ಇದಕ್ಕಾಗಿ ತಾಂಜ್ವಾ ಪರ್ವತದಿಂದ ವಿಶೇಷ ಚಹಾದ ಚಿಗುರೆಲೆಗಳನ್ನು ತರುತ್ತಾರೆ. ಸಕ್ಕರೆ, ಕುಂಬಳಕಾಯಿರಸ, ಅನಾನಸು ಮಿಶ್ರಿತ ಕಾಫಿ ಡಿಕಾಕ್ಷನ್ ಕೊಳದ ಈಜು ಹಲವು ಕಾಯಿಲೆಗಳನ್ನು ಗುಣಪಡಿಸುತ್ತದಂತೆ. ಹೀಗೆಯೇ ಚಾಕೊಲೇಟ್ ದ್ರಾವಣದ ಸ್ನಾನವೂ ಜಪಾನೀಯರ ಭಿನ್ನ ಅಭಿರುಚಿಯ ದ್ಯೋತಕವಾಗಿದೆ.

■ ಪ. ರಾಮಕೃಷ್ಣ ಶಾಸ್ತ್ರಿ

